ನಿಮ್ಮೊಡನೆ

# ಪ್ರಜಾಸತ್ತೆಯಲ್ಲಿ ಪಾಳೇಗಾರಿಕೆ!

ಒಂದೂವರೆ ಸಹಸ್ರ ವರ್ಷಗಳ ಸುದೀರ್ಘ ಸಾಹಿತ್ಯ ಚರಿತ್ರೆ ಇರುವ ಕನ್ನಡ, ಇಷ್ಟು ಪ್ರಾಚೀನತೆ ಇರುವ ಕೆಲವೇ ಭಾಷೆಗಳಲ್ಲಿ ಒಂದು ಎಂಬುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಪ್ರಾಚೀನ ಸಾಹಿತ್ಯವಾದರೂ ಹಲವು ಬಗೆಯ ಪ್ರಕಾರ ವೈವಿಧ್ಯಗಳಿಂದ ಶ್ರೀಮಂತವಾದದ್ದು. ಈಗ ಜಗತ್ತಿನ ಜ್ಞಾನ ಭಂಡಾರದ ಕಿಟಕಿ ಎಂದು ಕೆಲವರು ಬಣ್ಣಿಸುತ್ತಿರುವ ಇಂಗ್ಲಿಷ್ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದ್ದಾಗ ಕನ್ನಡದಲ್ಲಿ ಪ್ರೌಢ ಶೈಲಿಯ ಮಹಾಕಾವ್ಯಗಳು ರಚನೆಯಾಗಿ ಪಂಡಿತ ವರ್ಗದಲ್ಲಿ ಮನ್ನಣೆ ಪಡೆದಿದ್ದವು. ದೇಶದಲ್ಲಿ ಬ್ರಿಟಿಷರ ಆಳ್ವಿಕೆ ಪ್ರಾರಂಭವಾಗುವವರೆಗೂ ಕನ್ನಡವೂ ಸೇರಿದಂತೆ ದೇಶ ಭಾಷೆಗಳ ಗ್ರಂಥಸ್ಥ ಸಾಹಿತ್ಯ ರಚನೆಗೆ ಆಸರೆಯಾಗಿದ್ದು ರಾಜಾಶ್ರಯವೇ. ಆಳುವ ಅರಸರ ಸಾಮೀಪ್ಯ ಸೌಲಭ್ಯವಿಲ್ಲದ ಜನಸಾಮಾನ್ಯರು ತಮ್ಮದೇ ದೇಸೀ ಶೈಲಿಯಲ್ಲಿ ಸೃಷ್ಟಿಸಿದ ಜಾನಪದ ಸಾಹಿತ್ಯಕ್ಕೆ ಶಿಷ್ಟ ಸಾಹಿತ್ಯಕ್ಕಿಂತ ಹೆಚ್ಚಿನ ಪ್ರಾಚೀನತೆ ಇದ್ದರೂ ಅದಕ್ಕೆ ಸೂಕ್ತ ದಾಖಲೆ ಇಲ್ಲದಿರುವುದನ್ನು ಮರೆಯಲಾಗದು. ರಾಜರ ಆಸರೆ ಇರಲಿ, ಇಲ್ಲದಿರಲಿ, ಕಾವ್ಯ ಸೃಷ್ಟಿಯಲ್ಲಿ ತೊಡಗಿದ ಕನ್ನಡದ ಹಿರಿಯರು ಯಾವತ್ತೂ ಆತ್ಮಾಭಿಮಾನವನ್ನು ಬಿಟ್ಟುಕೊಟ್ಟವರಲ್ಲ ಎಂಬುದು ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ದಾಖಲಾಗಿದೆ. ಸಾಮಂತರಾಜ ಅರಿಕೇಸರಿಯ ಆಶ್ರಯದಲ್ಲಿದ್ದ ಆದಿ ಕವಿ ಪಂಪನೇ 'ಪೆರರ್ ಈವುದೇನ್, ಪೆರರ್ ಮಾಡುವುದೇನ್, ಪೆರರಿಂದಮಪ್ಪುದೇನ್' ಎಂದು ಆತ್ಮಪ್ರತ್ಯಯವನ್ನು ಸಾರಿರುವುದು ಕನ್ನಡ ಸಾಹಿತ್ಯ ಪರಂಪರೆಯ ಅಭಿಮಾನ ಸ್ವಭಾವಕ್ಕೆ ಸಾಕ್ಷಿಯಾಗಿದೆ.

ಬ್ರಿಟಿಷರ ಆಳ್ವಿಕೆಗೆ ಕನ್ನಡನಾಡಿನ ಪ್ರದೇಶಗಳೆಲ್ಲವೂ ಒಳಪಟ್ಟು ಅಕ್ಷರ ವಿದ್ಯೆ ಸಮಾಜದ ಎಲ್ಲ ವರ್ಗಗಳಿಗೂ ಸಿಗುವಂತಾದಾಗ ಅದು ಸಾಹಿತ್ಯ ಸೃಷ್ಟಿಯಲ್ಲಿಯೂ ಅನುರಣಿತವಾಯಿತು. ಹತ್ತೊಂಬತ್ತು, ಇಪ್ಪತ್ತನೆಯ ಶತಮಾನಗಳಲ್ಲಿ ಇಂಗ್ಲಿಷ್ ಸಾಹಿತ್ಯ ಕನ್ನಡ ಪ್ರದೇಶಗಳ ಸುಶಿಕ್ಷಿತ ಜನರಲ್ಲಿ ಬೀರಿದ ಪ್ರಭಾವ ಆಧುನಿಕ ಕನ್ನಡದ ಸಾಹಿತ್ಯ ವೈವಿಧ್ಯತೆಗೆ ಕಾರಣವಾಯಿತು. ಸಾಹಿತ್ಯ ರಾಜಾಶ್ರಯವನ್ನು ತೊರೆದು ಜನಸಾಮಾನ್ಯರ ಸ್ವತ್ತಾಯಿತು. ಕೈಗಾರಿಕಾ ಕ್ರಾಂತಿಯಿಂದ ಆವಿಷ್ಕಾರಗೊಂಡ ಮುದ್ರಣ ತಾಂತ್ರಿಕತೆಯಿಂದ ಸಾಹಿತ್ಯ ಸೃಷ್ಟಿ ಮತ್ತು ಅದರ ಪ್ರಚಾರ ಜನಸಾಮಾನ್ಯರ ಕೈಗೆ ಎಟಕುವಂತಾಯಿತು. ಅದರ ಪರಿಣಾಮ ಈಚಿನ ಒಂದೂವರೆ ಶತಮಾನದಲ್ಲಿ ನಾಡಿನ ಸಾವಿರಾರು ಕನ್ನಡ ಲೇಖಕರಿಂದ ಲಕ್ಷಾಂತರ ಸಾಹಿತ್ಯ ಕೃತಿಗಳ ರಚನೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಸ್ತಿತ್ವ. ಅದರ ಮೂಲಕ ಕನ್ನಡಿಗರಲ್ಲಿ ನಾಡು ನುಡಿಯ ಬಗ್ಗೆ ಅಭಿಮಾನವನ್ನೂ ಜಾಗೃತಿಯನ್ನೂ ಮೂಡಿಸಲು ಕಾಲಕಾಲಕ್ಕೆ ಸಮ್ಮೇಳನಗಳ ವ್ಯವಸ್ಥೆಯೂ ನಡೆಯಿತು.

ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಪ್ರಜಾಸತ್ತೆ ಅಸ್ತಿತ್ವಕ್ಕೆ ಬರುವ ಮೊದಲು ಕನ್ನಡ ಸಾಹಿತ್ಯ ಪರಿಷತ್ತು ಜನತೆಯ ಸಂಪನ್ಮೂಲ ಮತ್ತು ಅಭಿಮಾನವನ್ನೇ ಅವಲಂಬಿಸಿ 39 ಸಮ್ಮೇಳನಗಳನ್ನು ನಡೆಸಿತ್ತು. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ ನಾಡವರನ್ನು ಭಾವನಾತ್ಮಕವಾಗಿ ಬೆಸೆಯುವುದರ ಜೊತೆಗೆ ಕನ್ನಡಕ್ಕೆಅವಶ್ಯಕವಾದ ನಿಘಂಟು, ಶಾಸ್ತ್ರ, ಪ್ರಾಚೀನ ಸಾಹಿತ್ಯ ಪ್ರಕಟಣೆಗಳ ಮೂಲಕ ನಾಡಿನ ಸಾಂಸ್ಕೃತಿಕ ಕ್ಷೇತ್ರವನ್ನು ಬಲಪಡಿಸುತ್ತಿದೆ. ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಂಡಿರುವ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಾಹಿತ್ಯ ಸಂಸ್ಥೆ ಎಂಬುದು ಜನಮಾನಸದಲ್ಲಿ ಬೇರೂರಿದೆ. ಅದರ ಚಟುವಟಿಕೆಗಳಿಗೆ ಎಲ್ಲ ಬಗೆಯ ಪೂರಕ ವ್ಯವಸ್ಥೆಯನ್ನು ಕಲ್ಪಿಸುವುದು ಪ್ರಜಾಸತ್ತಾತ್ಮಕ ಸರ್ಕಾರದ ಕರ್ತವ್ಯವೂ ಆಗಿದೆ.

ರಾಜ್ಯ ಸರ್ಕಾರ ನಾಡಿನ ಭಾಷೆಯ ಅಭಿವೃದ್ಧಿ, ಸಾಹಿತ್ಯದ ಬೆಳವಣಿಗೆ, ಜಾನಪದ ಸಂಪತ್ತಿನ ಸಂಗ್ರಹ ಮತ್ತು ರಕ್ಷಣೆ, ನಾಟಕ ರಂಗದ ಅಭ್ಯುದಯ, ಲಲಿತ ಕಲೆಗಳ ಉಳಿವು ಮೊದಲಾದ ಕಾರ್ಯಗಳನ್ನು ನಿರ್ವಹಿಸಲು ವಿವಿಧ ಅಕಾಡೆಮಿಗಳನ್ನು ಅಸ್ತಿತ್ವಕ್ಕೆ ತಂದಿದೆ. ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಯೋಜನೆಗಳಿಗೂ ಆರ್ಥಿಕ ಸೌಲಭ್ಯ ನೀಡುತ್ತಿದೆ. ಇವೆಲ್ಲ ಯಾವುದೇ ನಾಗರಿಕ ಸರ್ಕಾರದ ಕರ್ತವ್ಯಗಳು. ಜನರ ತೆರಿಗೆಯ ಹಣವನ್ನು ಜನತೆಯ ಬದುಕಿನ ಗುಣಮಟ್ಟ ಹೆಚ್ಚಳಕ್ಕಾಗಿ ಸಾಂಸ್ಕೃತಿಕ ಕ್ಷೇತ್ರದ ಸಂಘಟನೆಗಳಿಗೆ ನೀಡುವುದು ಸರ್ಕಾರದ ಹೊಣೆಯೂ ಆಗಿದೆ. 'ಸರ್ಕಾರ ಹಣ ನೀಡಿದ ಕಾರಣಕ್ಕೆ ಸಾಹಿತ್ಯ ಪರಿಷತ್ತು ನಡೆಸುವ ಸಮ್ಮೇಳನಗಳಲ್ಲಿ ಜನಪ್ರತಿನಿಧಿಗಳನ್ನು ಟೀಕಿಸಬಾರದು' ಎಂದು ಕನ್ನಡ– ಸಂಸ್ಕೃತಿ ಸಚಿವರು ಇತ್ತೀಚೆಗೆ ಶಾಸನಸಭೆಯಲ್ಲಿ ಕಿಡಿ ಕಾರಿದ್ದು ಕರ್ನಾಟಕದ ಪ್ರೌಢ ರಾಜನೀತಿಯ ಪರಂಪರೆಯಲ್ಲಿ ಒಂದು ಕಪ್ಪು ಚುಕ್ಕೆ. ಪ್ರಜಾಸತ್ತೆಯಲ್ಲಿ ಪಾಳೇಗಾರಿಕೆಯ ಸಂಕೇತ. ರಾಜ್ಯದ ರಾಜಕೀಯ ಮುಟ್ಟಿದ ನೈತಿಕ ದಿವಾಳಿತನದ ಸಂಕೇತವೂ ಹೌದು. ಕನ್ನಡಿಗರ ಒಕ್ಕೊರಲಿನ ಖಂಡನೆಗೆ ಅರ್ಹವಾದ ವಿಷಯವಿದು.

■ ಲಕ್ಷ್ಮಣ ಕೊಡಸೆ

ಸರ್ಕಾರ ಹಣ ನೀಡಿದ ಕಾರಣಕ್ಕೆ ಸಾಹಿತ್ಯ ಪರಿಷತ್ತು ನಡೆಸುವ ಸಮ್ಮೇಳನಗಳಲ್ಲಿ ಜನಪ್ರತಿನಿಧಿಗಳನ್ನು ಟೀಕಿಸಬಾರದು ಎಂದು ಕನ್ನಡ– ಸಂಸ್ಕೃತಿ ಸಚಿವರು ಇತ್ತೀಚೆಗೆ ಶಾಸನಸಭೆಯಲ್ಲಿ ಕಿಡಿ ಕಾರಿದ್ದು ಕರ್ನಾಟಕದ ಪ್ರೌಢ ರಾಜನೀತಿಯ ಪರಂಪರೆಯಲ್ಲಿ ಒಂದು ಕಪ್ಪು ಚುಕ್ಕೆ.

